ನೇಮಕ ಮಾಡುವಾಗ ಪದವಿ ಜೊತೆಗೆ ಬಿ.ಇಡಿ ಪದವಿಯನ್ನು ಹೊಂದಿರಬೇಕಾಗುತ್ತದೆ.

ಪ್ರೌಢಶಾಲಾ ಶಿಕ್ಷಕರ ಕಾರ್ಯ ಸ್ವರೂಪ ಹಾಗೂ ವಾರ್ಡನ್‌ಗಳ ಕಾರ್ಯ ಸ್ವರೂಪದಲ್ಲಿ ವ್ಯತ್ಯಾಸವಿರುವುದರಿಂದ, ಪ್ರೌಢಶಾಲಾ ಶಿಕ್ಷಕರ ವೇತನಕ್ಕೆ ಸಮನಾದ ವೇತನ ಶ್ರೇಣಿಯನ್ನು ವಾರ್ಡನ್ ಹುದ್ದೆಗಳಿಗೆ ನೀಡಲಾಗುತ್ತಿಲ್ಲ. ಪ್ರಸ್ತುತ ಜಾರಿಯಲ್ಲಿರುವ 6ನೇ ವೇತನ ಆಯೋಗದ ಶಿಫಾರಸ್ಸಿನ ಮೇರೆಗೆ ವಾರ್ಡನ್‌ಗಳಿಗೆ ₹ 14550–26700ರ ವೇತನ ಶ್ರೇಣಿಯನ್ನು ಪಾವತಿಸಲಾಗುತ್ತಿದೆ.

ಆ) ಮತ್ತು ಇ) ಹೌದು

ಸಮಾಜ ಕಲ್ಯಾಣ ಇಲಾಖೆಯನ್ನು ಸಮಗ್ರವಾಗಿ ಪುನರ್ ರಚಿಸುವ (Re-organization) ಪ್ರಸ್ತಾವನೆ ಸರ್ಕಾರದ ಮುಂದಿರುವುದರಿಂದ ಪುನರ್ ರಚನೆಯ ನಂತರ ಸಿ & ಆರ್ ನಿಯಮಗಳನ್ನು ಸಮಗ್ರವಾಗಿ ಬದಲಾವಣೆ ಮಾಡಲಾಗುವುದು.

ಹಾಸ್ಟೆಲ್‌ಗಳಿಗೆ ಆಹಾರ ಸರಬರಾಜು ಮಾಡುವ ಪದಾರ್ಥಗಳು

835(884); ಶ್ರೀ ಅಶೋಕ ಖೇಣಿ (ಬೀದರ್ ದಕ್ಷಿಣ)

ಅ) ಬೀದರ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು;

ಆ) ಕಳೆದ ಮೂರು ವರ್ಷಗಳಲ್ಲಿ ಹಾಸ್ಟೆಲ್‌ಗಳಿಗೆ ಖರೀದಿಸಿದ ಆಹಾರ ಪದಾರ್ಥಗಳು ಹಾಗೂ ಸಾಮಾಗ್ರಿಗಳೆಷ್ಟು (ವಿವರ ನೀಡುವುದು);

ಇ) 3 ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು ಹಾಗೂ ಈ ಪೈಕಿ ಖರ್ಚಾದ ಅನುದಾನವೆಷ್ಟು (ವಿವರ ನೀಡುವುದು);

ಈ) 3 ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು ಹಾಗೂ ಈ ಪೈಕಿ ಖರ್ಚಾದ ಅನುದಾನವೆಷ್ಟು (ವಿವರ ನೀಡುವುದು);

ಉ) ಆಹಾರ ಪದಾರ್ಥ ಹಾಗೂ ಸಾಮಾಗ್ರಿಗಳನ್ನು ಸರಬರಾಜು ಮಾಡಿರುವ ಟೆಂಡರ್ ಯಾರು (ವಿವರ ನೀಡುವುದು)?

ಶ್ರೀ ಹೆಚ್.ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಬೀದರ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ 05 ಮೆಟ್ರಿಕ್ ಪೂರ್ವ, 02 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಹಾಗೂ ಪರಿಶಿಷ್ಟ ವರ್ಗಗಳ ನಿರ್ದೇಶನಾಲಯದಿಂದ 01 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಕಾರ್ಯನಿರ್ವಹಿಸುತ್ತಿವೆ.

ಆ) (₹ ಲಕ್ಷಗಳಲ್ಲಿ)

ಕ್ರ ಸಂ	ವರ್ಷ	ಖರೀದಿಸಿದ ಆಹಾರ ಪದಾರ್ಥಗಳು ಹಾಗೂ ಸಾಮಾಗ್ರಿಗಳ ಮೊತ್ತ	
		ಸಮಾಜ ಕಲ್ಯಾಣ ಇಲಾಖೆ	ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ
01	2010-11	39 65	2.925
02	2011-12	46.425	3.840

ಇ) (₹ ಲಕ್ಷಗಳಲ್ಲಿ)

ಕ್ರ ಸಂ	ವರ್ಷ	ಸಮಾಜ ಕಲ್ಯಾಣ ಇಲಾಖೆ		ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ	
		ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ
01	2010-11	39.65	39.65	3.25	2.925
02	2011-12	46.425	46.425	4.00	3.840
03	2012-13	46.425	46.425	4.00	3.600

ಈ) (₹ ಲಕ್ಷಗಳಲ್ಲಿ)

ಕ್ರ ಸಂ	ವರ್ಷ	ಸಮಾಜ ಕಲ್ಯಾಣ ಇಲಾಖೆ		ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ	
		ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ
01	2010-11	39.65	39.65	3.25	2.925
02	2011-12	46.425	46.425	4.00	3.840
03	2012-13	46.425	46.425	4.00	3.600

ಉ) ಸಮಾಜ ಕಲ್ಯಾಣ ಇಲಾಖೆಗೆ ಟೆಂಡರ್‌ದಾರರು ಶ್ರೀ ಬಸವೇಶ್ವರ ಎಂಟರ್‌ಪ್ರೈಸಸ್, ಬೀದರ್ ಇವರಾಗಿದ್ದು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯಕ್ಕೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಶ್ರೀ ಬಸವೇಶ್ವರ ಎಂಟರ್‌ಪ್ರೈಸಸ್, ಬೀದರ್ ಹಾಗೂ ಸಾಮಾಗ್ರಿಗಳನ್ನು ಖರೀದಿಸಲು ಡಿ.ಎಸ್.ಎಂ.ಎಸ್., ಬೆಂಗಳೂರು ಮತ್ತು ಖವಾಸ್, ಹೈದ್ರಾಬಾದ್ ಇವರು ಟೆಂಡರ್‌ದಾರರಾಗಿರುತ್ತಾರೆ.

ಕಲುಷಿತ ನೀರು

836(930); ಶ್ರೀ ಅಶೋಕ ಖೇಣಿ (ಬೀದರ್ ದಕ್ಷಿಣ)

ಅ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಗದಲ್ ಗ್ರಾಮದಲ್ಲಿ ಕಲುಷಿತ ಕುಡಿಯುವ ನೀರಿನ ದೋಷದಿಂದ ಮೃತಪಟ್ಟಿರುವವರ ಸಂಖ್ಯೆಯೆಷ್ಟು (ಮಾಹಿತಿ ಒದಗಿಸುವುದು);

ಆ) ಸರ್ಕಾರ ಮೃತಪಟ್ಟ ವ್ಯಕ್ತಿಗೆ ಪರಿಹಾರ ನೀಡಿದೆಯೇ;

ಇ) ಜಿಲ್ಲೆಯಲ್ಲಿ ಕಲುಷಿತ ನೀರಿನ ದೋಷದಿಂದ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು)?

ಶ್ರೀ ಯು.ಟಿ.ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಗದಲ್ ಗ್ರಾಮದಲ್ಲಿ ಕಲುಷಿತ ಕುಡಿಯುವ ನೀರಿನ ದೋಷದಿಂದ ಮೃತಪಟ್ಟಿರುವವರ ಸಂಖ್ಯೆ: 01

(ಶ್ರೀಮತಿ ಮಹಾದೇವಿ ಗಂಡ ನೀಲಕಂಠ ಶೇಕಾಣೆ ವಯಸ್ಸು : 35) ದಿನಾಂಕ : 22/09/2013 ರಂದು ಮರಣ ಹೊಂದಿರುತ್ತಾರೆ.